ಅಸಲು ದಾವೆ ಸಂಖ್ಯೆ: 51/2023
ಪಿ.ಡಬ್ಲ್ಯೂ.1 ಸೋಮಣ್ಣ ಹಳೇಮನಿ

ಸಾಕ್ಷಿಗೆ ದಿನಾಂಕ:19/02/2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ನಂ. 1 ಪರ ವಕೀಲರಾದ ಶ್ರೀ. ಎಸ್ ವಿ ಜೆ ರವರಿಂದ.

ನಾನು ಈ ದಾವೆಯನ್ನು ಪ್ರತಿವಾದಿ ನಂ. 1 ಮಹೇಂದ್ರ ಇವರ ವಿರುದ್ಧ ಮಾಡಿದ್ದೇನೆ ಮತ್ತು ಪ್ರತಿವಾದಿ ನಂ. 1 ರವರು ಪ್ಲಾಟುಗಳನ್ನು ಮಾರಾಟ ಮಾಡಿದ್ದು ಖರಿದಿಸಿದರವನ್ನು ಪಾರ್ಟಿ ಮಾಡಿದ್ದೇನೆ. ನಾನು ಪ್ಲಾಟ ನಂ.20/1 ಅ/2 ಸಲುವಾಗಿ ಈ ದಾವೆ ಮಾಡಿದ್ದೇನೆ. ದಾವಾ ಸ್ವತ್ತು 25 ಗುಂಟೆ ಇದೆ. ದಾವಾ ಸ್ವತ್ತು ನನ್ನ ಪಿತ್ರಾಜಿತ ಸ್ವತ್ತು. ಸರ್ವೆ ನಂ. 20 ಒಟ್ಟು ಕ್ಷೇತ್ರ ಎಷ್ಟು ಎಂದು ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ. 20 ರಲ್ಲಿ ಒಟ್ಟು 6 ಹಿಸ್ಸೆಗಳು ಆಗಿವೆ. ಪ್ರತಿ ಹಿಸ್ಸಾದ ಕ್ಷೇತ್ರ ಹೇಳಲು ಬರುವುದಿಲ್ಲ. 1984 ನೇ ಇಸವಿಯಲ್ಲಿ ಹಿಸ್ಸೆಗಳು ಆಗಿವೆ.

2. ದಾವಾ ಸ್ವತ್ತು ನನ್ನ ಹಿಸ್ಸೆಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ಮುಗಿದ ನಂತರ ನನ್ನ ಹೆಸರು ಬಂದಿದೆ. ದಾವಾ ಸ್ವತ್ತು ನಮ್ಮ ನಮ್ಮ ಅಣ್ಣ ತಮ್ಮಂದಿರ ನಡುವೆ ಆದ ಹೊಂದಾಣಿಕೆಯಲ್ಲಿ ನನಗೆ ಬಂದಿದೆ. ದಾವಾ ಸ್ವತ್ತಿನ ಚೆಕಬಂದಿ ಹೇಳಲು ಬರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂ. 21/1 ಜಮೀನು, ಪಶ್ಚಿಮಕ್ಕೆ ವಿಠಲ್ ಹಳೇಮನಿ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಕೋಟೆ ಗೋಡೆ ಇದೆ. ದಾವಾ ಸ್ವತ್ತಿನಲ್ಲಿ ಕೋಟೆ ಗೋಡೆಗೆ ಹೊಂದಿಕೊಂಡು ಇರುವ ತೆಗ್ಗು ಬರುತ್ತದೆ ಎಂದರೆ ಸರಿ . ಸದರಿ ತೆಗ್ಗು 04 ಗುಂಟೆ ಕ್ಷೇತ್ರ ಇರುತ್ತದೆ. ತೆಗ್ಗನ್ನು ಬಿಟ್ಟು ಉತ್ತರದ 21 ಗುಂಟೆ ಜಮೀನನ್ನು ಪ್ರತಿವಾದಿ ನಂ. 1 ರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ . ನಾನು ಮಾರಾಟ ಮಾಡಿದ ನಂತರ 21 ಗುಂಟೆ ಜಮೀನಿಗೆ ಪ್ರತಿವಾದಿ ನಂ.1 ರವರು ಹೆಸರು ಮತ್ತು 04 ಗುಂಟೆಗೆ ನನ್ನ ಹೆಸರು ಬರುತ್ತಿತ್ತು ಎಂದರೆ ಸರಿ . ನಾನು ನಿಪಿ–15 ರಂತೆ 25 ಗುಂಟೆ ಜಮೀನನ್ನು ಪ್ರತಿವಾದಿ ನಂ.1 ರವರಿಗೆ ದಿ.29.10.2005 ರಂದು ಮಾರಾಟ ಮಾಡಿದ್ದೇನೆ ಎಂದರೆ ಸರಿ . ನಾನು ನಿಪಿ–15 ನ್ನು ಮಾಡಿಕೊಟ್ಟ ನಂತರ 21 ಗುಂಟೆ ಜಮೀನಿಗೆ ಮತ್ತು ನನ್ನ 04 ಗುಂಟೆ ಜಮೀನಿಗೆ ಬಿನ್ ಶೆತಕಿ ಮಾಡಲು ಅರ್ಜಿ ಕೊಟ್ಟಿದ್ದೇವು ಎಂದರೆ ಸುಳ್ಳು. ಸಾಕ್ಷಿಗೆ ಈಗ ನಿಪಿ–12 ನ್ನು ತೋರಿಸಿ ಅದರಲ್ಲಿ ನಿಮ್ಮ ಸಹಿ ಇದೆ ಎಂದು ಸೂಚಿಸಲಾಗಿ ಸಾಕ್ಷಿಯು ನನ್ನ ಸಹಿ ಅಲ್ಲ

ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ–15 ನ್ನು ತೋರಿಸಿ ಅದರಲ್ಲಿ ನಿಮ್ಮ ಸಹಿ ಇದೆ ಎಂದು ಸೂಚಿಸಲಾಗಿ ಸಾಕ್ಷಿಯು ನನ್ನ ಸಹಿ ಇದೆ ಎಂದು ಒಪ್ಪುತ್ತಾರೆ.

3. ನಾನು ನನ್ನ 04 ಗುಂಟೆ ಜಮೀನನ್ನು ಬಿನ್ ಶೇತಕಿ ಮಾಡಿಸಿಕೊಂಡಿಲ್ಲ. ಪ್ರತಿವಾದಿ ನಂ. 1 ರವರು ತಮ್ಮ 21 ಗುಂಟೆ ಜಮೀನನ್ನು ಬಿನ್ ಶೇತಕಿ ಮಾಡಿಸಿಕೊಂಡಿದ್ದಾರೆ. ಪ್ರತಿವಾದಿ ನಂ.1 ರವರು ತಮ್ಮ 21 ಗುಂಟೆ ಜಮೀನಿನಲ್ಲಿ 7 ಪ್ಲಾಟು ರಚನೆ ಮಾಡಿದ್ದಾರೆ ಎಂದರೆ ಸರಿ . ಪ್ಲಾಟು ರಚನೆ ಮಾಡಿದ ಬಗ್ಗೆ ನಿಪಿ–22 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಪಿ–20 ರಲ್ಲಿ ಕಾಣಿಸುವ 7 ಪ್ಲಾಟುಗಳು ನಾನು ಪ್ರತಿವಾದಿ ನಂ.1 ರವರಿಗೆ ಮಾರಾಟ ಮಾಡಿದ 21 ಗುಂಟೆ ಜಮೀನಿನಲ್ಲಿ ಬರುತ್ತವೆ ಎಂದರೆ ಸಾಕ್ಷಿಯು ನನ್ನ ಜಮೀನನ್ನು ಸಹ ಕಬ್ಜೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನನ್ನ ಜಮೀನಿನ ದಕ್ಷಿಣಕ್ಕೆ ಕಬ್ಜೆ ಮಾಡಿಕೊಂಡಿದ್ದಾರೆ. ಸಾಕ್ಷಿ ಮುಂದುವರೆದು ನನ್ನ ಜಮೀನನ್ನು ಬಿನ್ ಶೇತಕಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಬಿನ್ ಶೇತಕಿ ಮಾಡಿಸಲು ನಾನು ಸಹ ಅರ್ಜಿ ಕೊಟ್ಟಿದ್ದೇನು ಎಂದರೆ ಸುಳ್ಳು. ಪ್ರತಿವಾದಿ ನಂ.1 ರಚಿಸಿರುವ ಪ್ಲಾಟ ನಂ. 7 ನನ್ನ ಜಾಗೆಯಲ್ಲಿ ಬರುತ್ತದೆ. ನನ್ನ ಜಾಗೆಯ ದಕ್ಷಿಣಕ್ಕೆ ಬರುತ್ತದೆ. ಪ್ರತಿವಾದಿ ನಂ.1 ರಚನೆ ಮಾಡಿರುವ 7 ಪ್ಲಾಟನ ಪೂರ್ವಕ್ಕೆ 09 ಮೀಟರ ರಸ್ತೆ ಇದೆ ಎಂದರೆ ಸರಿ . ಪ್ರತಿವಾದಿ ನಂ.1 ರವರು ನಿಪಿ–20 ರಲ್ಲಿ ತೋರಿಸಿರುವಂತೆ ನಾಲ್ಕುವರೆ ಮೀಟರ ಜಾಗೆಯನ್ನು ರಸ್ತೆಗಾಗಿ ಬಿಟ್ಟಿದ್ದು ಮತ್ತು ಉಳಿದ ನಾಲ್ಕುವರೆ ಮೀಟರ ಜಾಗೆಯನ್ನು ಪೂರ್ವದ ಹಳೇಮನಿ ಇವರು ಬಿಟ್ಟಿದ್ದಾರೆ ಎಂದರೆ ಈ ರೀತಿ ಒಟ್ಟು 09 ಮೀಟರ ಅಗಲದ ರಸ್ತೆ ಇದೆ ಎಂದರೆ ಸರಿ .

4. ನಾನು ಪ್ರತಿವಾದಿ ನಂ.1 ಇವರು ನನ್ನ ಜಮೀನಿನಲ್ಲಿ ಅತಿಕ್ರಮಣ ಮಾಡಿದ್ದಾರೆ ಎಂದು ಅಳತೆ ಮಾಡಿಸಲು ಯಾವುದೇ ಅರ್ಜಿ ಕೊಟ್ಟಿಲ್ಲ. 21 ಗುಂಟೆ ಜಮೀನಿನ ದಕ್ಷಿಣಕ್ಕೆ ಇರುವ ಜಾಗೆ ಚರಂಡಿ ಇದೆ ಎಂದರೆ ಸರಿ . ನನ್ನ ಜಾಗೆಯು ಚರಂಡಿಯಲ್ಲಿ ಹೋಗಿದೆ ಎಂದರೆ ಸುಳ್ಳು. ಪ್ರತಿವಾದಿ ನಂ.1 ನನ್ನ ಜಾಗೆಯಲ್ಲಿ ಅತಿಕ್ರಮಣ ಮಾಡಿಲ್ಲ ಎಂದರೆ ಸುಳ್ಳು. ನಿಪಿ–20 ರಲ್ಲಿ ತೋರಿಸಿರುವ 09 ಮೀಟರ ಅಗಲದ ರಸ್ತೆ ಇದೆ ಎಂದರೆ ಸರಿ . ಪ್ರತಿವಾದಿ ನಂ.1 ರವರು ರಚನೆ ಮಾಡಿರುವ ಪ್ಲಾಟುಗಳಲ್ಲಿ ಕೆಲವು ಪ್ಲಾಟುಗಳನ್ನು

ಮಾರಾಟ ಮಾಡಿದ್ದಾರೆ ಎಂದರೆ ಸರಿ . ನಾನು 21 ಗುಂಟೆ ಜಮೀನನ್ನು ಮಾರಾಟ ಮಾಡುವಾಗ ಅಳತೆ ಮಾಡಿಸಿ ಮಾರಾಟ ಮಾಡಿದ್ದೇನು. ಅಳತೆ ಮಾಡಿಸುವಾಗ ನನ್ನ ಪೂರ್ತಿ ಜಮೀನಿನ ಉತ್ತರದಿಂದ ದಕ್ಷಿಣದ ಕಡೆಗೆ ಅಳೆದಿದ್ದೇವು. 21 ಗುಂಟೆ ಜಮೀನಿನ ಗಡಿಯಲ್ಲಿ ಕಲ್ಲು ನೆಟ್ಟು ಗಡಿ ಗುರುತಿಸಿ ಮಾರಾಟ ಮಾಡಿದೇನು ಎಂದರೆ ಸರಿ . ನಾನು 21 ಗುಂಟೆ ಜಾಗೆಯ ಕಬ್ಜೆ ಮಾತ್ರ ಕೊಟ್ಟಿದ್ದೇನು ಎಂದರೆ ಸಾಕ್ಷಿಯು ನನ್ನ ಎಲ್ಲಾ ಜಮೀನಿನ ಕಬ್ಜೆ ಪಡೆದು ಕೆ ಜೆ ಪಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ.1 ನಿಪಿ–15 ರ ಕಾಲಕ್ಕೆ ನನ್ನ ಎಲ್ಲಾ ಜಮೀನು 25 ಗುಂಟೆ ಜಮೀನಿನ ಕಬ್ಜಾ ಪಡೆದಿದ್ದಾರೆ. ಪ್ರತಿವಾದಿ ನಂ.1 ನನ್ನ ಜಮೀನಿನ ಮೇಲೆ ಕಬ್ಜಾ ಮಾಡಿದಕ್ಕೆ ನಾನು ಪೋಲಿಸ್ ಠಾಣೆಗೆ ಮತ್ತು ಜಿಲ್ಲಾಧಿಕಾರಿಗೆ, ತಹಶಿಲ್ದಾರ, ಬಿಡಿಎ, ನಗರಪಾಲಿಕೆ ರವರಿಗೆ ಅರ್ಜಿ ಕೊಟ್ಟಿದ್ದೇನು. ನಾನು ಅರ್ಜಿ ಕೊಟ್ಟ ಬಗ್ಗೆ ದಾಖಲಾತಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ.

5. ನಾನು ನಿಪಿ–23 ನ್ನು ಆದರ್ಶ ನಗರ ಪೋಲಿಸ್ ಠಾಣೆಗೆ ದಿ.01.05.2024 ರಂದು ಕೊಟ್ಟಿದ್ದೇನೆ ಎಂದರೆ ಸರಿ. ನಾನು ತಹಶಿಲ್ದಾರ ಕಚೇರಿಗೆ, ಜಿಲ್ಲಾಧಿಕಾರಿ ಕಚೇರಿಗೆ, ಬಿಡಿಎ, ಮಹಾನಗರ ಪಾಲಿಕೆಗೆ ಕೊಟ್ಟಿದ್ದೇನು ಎಂದು ಹೇಳುವ ಅರ್ಜಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ನಮ್ಮ ವಕೀಲರ ಬಳಿ ಕೊಟ್ಟಿದ್ದೇನು ಎಂದು ಹೇಳುತ್ತಾರೆ.

6. 7 ಪ್ಲಾಟುಗಳ ಪೈಕಿ 1 ಪ್ಲಾಟನಲ್ಲಿ ಮನೆ ಕಟ್ಟಿದ್ದಾರೆ ಮತ್ತು ಇನ್ನೊಂದು ಪ್ಲಾಟನಲ್ಲಿ ಕಂಪೌಂಡ ಕಟ್ಟಿದ್ದಾರೆ. ಸಾಕ್ಷಿಗೆ ಈಗ ನಿಪಿ–28 ನ್ನು ತೋರಿಸಿ ಅದರಲ್ಲಿರುವ ಮನೆ ಯಾರದ್ದು ಎಂದರೆ ಸಾಕ್ಷಿಯು ತುಳಸಿ ಅವರ ಮನೆ ಎಂದು ಹೇಳುತ್ತಾರೆ. ನಾನು ತುಳಸಿ ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–30 ಮತ್ತು 31 ರಲ್ಲಿ ಕೋಟೆ ಗೋಡೆ ಕಾಣಿಸುತ್ತಿದೆ ಎಂದರೆ ಸರಿ . ನಿಪಿ–30 ಮತ್ತು 31 ರಲ್ಲಿ ಪ್ರತಿವಾದಿ ನಂ. 1 ರವರು ಕಟ್ಟಿದ ಆವಾರ ಗೋಡೆ ಕಾಣುತ್ತದೆ ಎಂದರೆ ಸರಿ . ಪ್ರತಿವಾದಿ ನಂ.1 ರವರು ತಮ್ಮ ಆವಾರ ಗೋಡೆಯನ್ನು ಕೋಟೆ ಗೋಡೆಯಿಂದ ದೂರದಲ್ಲಿ ಕಟ್ಟಿದ್ದಾರೆ ಎಂದರೆ ಸರಿ . ಕೋಟೆ ಗೋಡೆ ಮತ್ತು ಪ್ರತಿವಾದಿ ನಂ.1 ರವರ ಆವಾರ ಗೋಡೆಗೂ ಮದ್ಯದಲ್ಲಿ ಎಷ್ಟು ಜಾಗೆ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ

ಮುಂದುವರೆದು ವಿಠಲ್ ಹಳೇಮನಿ ಅವರಿಗೆ ಗೊತ್ತು ಎಂದು ಹೇಳುತ್ತಾರೆ. ಕೋಟೆ ಗೋಡೆಗೂ ಮತ್ತು ಪ್ರತಿವಾದಿ ನಂ.1 ರವರ ಆವಾರ ಗೋಡೆಗೂ ಮದ್ಯದಲ್ಕಿ ಕಂದಕ ಇದೆ ಎಂದರೆ ಸುಳ್ಳು. ಕೋಟೆ ಗೋಡೆಗೂ ಮತ್ತು ಆವಾರ ಗೋಡೆಗೂ ಮದ್ಯದಲ್ಲಿ ಇರುವ ಕಂದಕ ನನ್ನ ಜಾಗೆ ಎಂದರೆ ಸುಳ್ಳು.

7. ಪ್ರತಿವಾದಿ ನಂ.1 ರವರು 2006 ನೇ ಇಸವಿಯಲ್ಲಿ ತಮ್ಮ 21 ಗುಂಟೆ ಜಮೀನನ್ನು ಬಿನ್ ಶೆತಕಿ ಮಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬಿನ್ ಶೆತಿಕಿ ಮಾಡಿಸಲು ನಾನು ಅರ್ಜಿ ಕೊಟ್ಟಿದ್ದೇನು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನನ್ನ ಡೂಪ್ಲಿಕೆಟ ಸಹಿ ಮಾಡಿ ಈ ರೀತಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನಿಪಿ–13 ರಲ್ಲಿ ನಾನು ಕೊಟ್ಟ ಅರ್ಜಿ ಮೇರೆಗೆ ಬಿನ್ ಶೆತಕಿ ಮಾಡಿದ್ದಾರೆ ಎಂದು ಬರೆದಿದ್ದು ಇದೆ ಎಂದರೆ ಸುಳ್ಳು. ನನ್ನ ಸಹಿಯನ್ನು ಡೂಪ್ಲಿಕೆಟ ಮಾಡಿಸಿ ಬಿನ್ ಶೆತಕಿ ಮಾಡಿದ್ದಾರೆ ಎಂದು ನಾನು ಪ್ರತಿವಾದಿ ನಂ.1 ರವರ ವಿರುದ್ದ ದೂರನ್ನು ಕೊಟ್ಟಿದ್ದೇನೆ. ನಾನು 2022 ನೇ ಇಸವಿಯಲ್ಲಿ ದೂರನ್ನು ಕೊಟ್ಟಿದ್ದೇನೆ. ಸಾಕ್ಷಿ ಮುಂದುವರೆದು ನಂತರದಲ್ಲಿ ಈ ದಾವೆ ಮಾಡಿದ್ದೇನೆ ಎಂದು ಹೇಳುತ್ತಾರೆ. ನಾನು ನಿಪಿ–15 ರಂತೆ 2015 ರಲ್ಲಿ ಮಾರಾಟ ಮಾಡಿದ್ದೇನು ನಂತರದಲ್ಲಿ 2006 ರಲ್ಲಿ ಪ್ರತಿವಾದಿ ನಂ.1 ರವರು ಬಿನ್ ಶೆತಕಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ .

8. ಕೆ ಜೆ ಪಿ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ನಿಪಿ–20 ರಂತೆ 2008 ರಲ್ಲಿ ಕೆ ಜೆ ಪಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–20 ಕೆ ಜೆ ಪಿ ಯಂತೆ ನಿಪಿ–22 ಡ ನಂ.3342 ಇದು 2008–2009 ರಲ್ಲಿ ಮಂಜೂರು ಆಗಿದೆ ಎಂದರೆ ಸುಳ್ಳು. ನಿಪಿ–1 ಪಹಣಿ ಪತ್ರಿಕೇಯಲ್ಲಿ ನನ್ನ ಹೆಸರು ನಿಪಿ–22 ಡ ನಂ. 3342 ರಂತೆ ಹತ್ತಿದೆ ಎಂದು ತೋರಿಸುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿ ನಂ.1 ರವರು ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ನನ್ನ 4 ಗುಂಟೆ ಜಮೀನಿನ ಪಹಣಿ ಪತ್ರಿಕೆಯನ್ನು ಕಾಲಕಾಲಕ್ಕೆ ತೆಗೆದುಕೊಳ್ಳುತ್ತಿದ್ದೇನು ಎಂದರೆ ಸರಿ . 2008–2009 ರಲ್ಲಿ ಪ್ರತಿವಾದಿ ನಂ.1 ರವರು ಕೆ ಜೆ ಪಿ ಮಾಡಿಸಿಕೊಂಡ ಬಗ್ಗೆ , ಬಿನ್ ಶೆತಕಿ ಮಾಡಿಸಿಕೊಂಡ ಬಗ್ಗೆ ನನಗೆ ಗೊತ್ತಾಗಿದೆ ಎಂದರೆ ಸುಳ್ಳು. ನನ್ನ 04 ಗುಂಟೆ ಜಮೀನು ಕಂದಕದಲ್ಲಿ

ಇದ್ದರು ಸಹ ನಾನು ಪ್ರತಿವಾದಿ ನಂ.1 ರವರು ಪ್ಲಾಟುಗಳನ್ನು ರಚನೆ ಮಾಡಿದ ಕಾರಣ ದೂರುದ್ದೇಶದಿಂದ ಈ ದಾವೆ ಮಾಡಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿ ನಂ.1 ರವರು ಇವತ್ತಿಗೂ 21 ಗುಂಟೆ ಜಾಗೆಯಲ್ಲಿ ಮಾತ್ರ ಸ್ವಾದಿನದಲ್ಲಿ ಇದ್ದಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು 25 ಗುಂಟೆ ಜಮೀನಿನಲ್ಲಿ ಸ್ವಾದಿನ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ.1 25 ಗುಂಟೆ ಜಮೀನಿನಲ್ಲಿ ಕಬ್ಜೆ ಮಾಡಿಕೊಂಡಿದ್ದಾರೆ ಎಂದು ತೋರಿಸಲು ನನ್ನ ಬಳಿ ದಾಖಲಾತಿಗಳು ಇಲ್ಲ ಎಂದರೆ ಸುಳ್ಳು. ನನ್ನ ಬಳಿ ಉತಾರ, ನಿಪಿ–15, ನಾನು ಕೊಟ್ಟ ದೂರುಗಳು ಇವೆ ಎಂದು ಹೇಳುತ್ತಾರೆ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ಈ ರೀತಿ ದಾವೆ ಮಾಡಿದಲ್ಲಿ ನನಗೆ ಏನಾದರೂ ಹಣ ಕೊಡುತ್ತಾರೆ ಎಂದು ಖೊಟ್ಟಿ ದಾವೆ ಮಾಡಿದ್ದೇನೆ ಎಂದರೆ ಸುಳ್ಳು.

ಪಾಟೀ ಸವಾಲು:ಪ್ರತಿವಾದಿ ನಂ. 3 ಎ ದಿಂದ ಸಿ ಪರ ವಕೀಲರಾದ ಶ್ರೀ. ಎಮ ಬಿ ಎಚ್ ರವರಿಂದ.

ಬಿನ್ ಶೆತಕಿ ಆದೇಶವನ್ನು ಮತ್ತು ಕೆ ಜೆ ಪಿಯನ್ನು ಸರ್ಕಾರಿ ಕಚೇರಿಯವರು ಮಾಡುತ್ತಾರೆ ಎಂದರೆ ಸರಿ . ಬಿನ್ ಶೇತಕಿ ಮಾಡಿಸಿಕೊಳ್ಳುವಾಗ ಜಮೀನಿನಲ್ಲಿ ವಿದ್ಯುತ ಕಂಬಗಳನ್ನು, ಚರಂಡಿ ಮತ್ತು ರಸ್ತೆಯನ್ನು ನಿರ್ಮಿಸುತ್ತಾರೆ ಎಂದರೆ ಸರಿ . 2008 ರಲ್ಲಿ ಪ್ರತಿವಾದಿ ನಂ.1 ರವರು ತಮ್ಮ ಜಮೀನಿನಲ್ಲಿ ಬಿನ್ ಶೆತಕಿ ಮಾಡಿಸುವ ಸಲುವಾಗ ಅಬಿವೃದ್ದಿ ಕೆಲಸಗಳನ್ನು ಮಾಡಿಸುವಾಗ ನೀವು ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಸ್ಥಳಕ್ಕೆ ಹೋಗಿ ತಕರಾರು ಮಾಡಿದಾಗ ಕೆಲಸವನ್ನು ನಿಲ್ಲಿಸುತ್ತಿದ್ದರು ನಂತರ ಕೆಲಸ ಶುರು ಮಾಡುತ್ತಿದ್ದರು ಎಂದು ಹೇಳುತ್ತಾರೆ. 2008 ನೇ ಇಸವಿಯಲ್ಲಿ ನಾನು ಪ್ರತಿವಾದಿ ನಂ.1 ರವರ ವಿರುದ್ದ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ . ಬಿನ್ ಶೆತಕಿ ಆದೇಶವನ್ನು ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ . ನಾನು ಕೆ ಜೆ ಪಿ ಯನ್ನು ಪ್ರಶ್ನಿಸಿ ಅಪಿಲು ಮಾಡಿಲ್ಲ ಎಂದರೆ ಸರಿ . ಈಗ ಪ್ಲಾಟುಗಳ ಬೆಲೆ ಹೆಚ್ಚಾದ ಕಾರಣ ಪ್ರತಿವಾದಿ ನಂ.3 ರವರ ವಾರಸುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನದು 01 ಇಂಚು ಜಾಗೆಯೂ ಸಹ ಇಲ್ಲ ಎಂದರೆ ಸುಳ್ಳು. ನಾನು ಸರ್ಕಾರಿ ಕಚೇರಿಯವರು ಬಿನ್ ಶೆತಕಿ ಆದೇಶ ಮಾಡಿದವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ . ಸದರಿ ಕಚೇರಿಯವರು ಬೇಕಾಯದೆಶಿರವಾಗಿ ಬಿನ್ ಶೆತಕಿ ಮಾಡಿದ್ದಾರೆ ಎಂದು ಮತ್ತು ಕೆ ಜೆ ಪಿ ಮಾಡಿದ್ದಾರೆ ಎಂದು ನಾನು ನೋಟಿಸು ಕೊಟ್ಟಿಲ್ಲ ಎಂದರೆ ಸಾಕ್ಷಿಯು ನಾನು ವಿನಂತಿ ಮಾಡಿಕೊಂಡಿದ್ದೇನೆ ಎಂದು ಹೇಳುತ್ತಾರೆ. ನಾನು ಸದರಿ ಕಚೇರಿ ಅವರನ್ನು ಪ್ರಶ್ನಿಸಿಲ್ಲ ಮತ್ತು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಅವರಿಗೆ ವಿಚಾರ ಮಾಡಿ ಎಂದು ಹೇಳಿದ್ದೇನು ಎಂದು ಹೇಳುತ್ತಾರೆ. ಸದರಿ ಕಚೇರಿಯವರು ಕಾನೂನು ಬದ್ದವಾಗಿ ನಿಪಿ–20 ಆದೇಶವನ್ನು ಹೊರಡಿಸಿದ್ದರು ಸಹ ಈಗ ಪ್ಲಾಟುಗಳ ಬೆಲೆ ಹೆಚ್ಚಾದ ಕಾರಣ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಈಗ ಒಂದು ಪ್ಲಾಟನ ಬೆಲೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಈಗ ಒಂದು ಪ್ಲಾಟನ ಬೆಲೆ 50,00,000/– ರೂ ಇದ್ದ ಕಾರಣ ನಾನು ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ಲಾಟು ಈಗ ಆಯಕಟ್ಟಿನ ಜಾಗೆಯಲ್ಲಿ ಇದೆ ಎಂದರೆ ಸರಿ . ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ಮೇಲೆ ಪ್ರತಿವಾದಿ ನಂ. 1 ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಮೊದಿಸುವುದಾಗಿ ಹೇಳುತ್ತಾರೆ.

ಪಾಟೀ ಸವಾಲು:ಪ್ರತಿವಾದಿ ನಂ.2 ಮತ್ತು 4 ಏಕತರ್ಫಿ ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆ: ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು,

ವಿಜಯಪುರ.